**ಕುರುವ ಬಸವರಾಜ್**

ಕಲೆ: ಎಸ್.ವಿ. ಹೂಗಾರ

# ನಲಿ ಮರೆಯಿಸು ಜೀವ



ತಲೆಮ್ಯಾಲೆ ಕಂಬಳಿ ಗುಬುರು ಹಾಕ್ಕೊಂಡಂಗೆ ಲೋಕಕ್ಕೆಲ್ಲಾ ಕಾವಳ ಕೌದದೆ. ಸೂಜಿಗಾತ್ರದ ಸಣ್ಣೆ(ಜರಡಿ)ಯ ಮೇಲೆ ಸಣ್ಣ ಸಣ್ಣಗೆ ಒಂದೇ ಸಮನಾಗಿ ನೀರು ಹಾಕ್ತಿದ್ದಾರೋ ಅನ್ನೊಹಂಗೆ ಹದವಾಗಿ ಇಬ್ಬನಿ ಹನಿ ತಟ ತಟ ಉದುರ್ತಿದೆ. ಮೂರು ಮಾರು ಆಚೆ ಯಾರಿದ್ದರೂ ಕಾಣರು. ಮುಸುಕಿದ ಮಂಜಿನ ಒಳಗಿಂದ ಸೂರ್ಯ ಈಚೆ ಬರೋಕೆ ಬಲು ತ್ರಾಸು ಪಡ್ತವನೆ. ನಡುಗುವ ಚಳಿ.

ಕೊಟ್ಟಿಗೆಯಿಂದ ಎತ್ತುಬಿಚ್ಚಿ ಅಂಗಳಕೆ ಕಟ್ಟುವವರು, ಗುಡಿಸಿ, ಸಗಣಿ ಬಾಚಿ ಊರ ಹೊರಗಿನ ತಿಪ್ಪೆಗೆ ಹಾಕಲು ಬುಟ್ಟಿ ಹೊತ್ತು ಸಾಗುವವರು, ಹುಲ್ಲಿನ ಬೆಂಕಿ ಹಾಕಿಕೊಂಡು ಮೈಒಡ್ಡಿ ಹದವಾಗಿ ಕಾಯಿಸಿಕೊಳ್ಳುವ ಮುದುಕರು, ಹರೆಯದ ಹುಡುಗರ ಗುಂಪು. ಮುಂದೆ ಕಾಯಿಸಿಕೊಂಡರೆ ಬೆನ್ನಿಗೆ ಚಳಿ. ಹಿಂದೆ ಕಾಯಿಸಿಕೊಂಡರೆ ಮುಂದೆ ಚಳಿ.

ಮುಸುಕಿದ ಇಬ್ಬನಿಯ ಮಬ್ಬು ಸರಿಸಿ ದಾರಿ ಬಿಡಿಸಿಕೊಂಡು, ಹೊತ್ತು ಈಚೆ ಇಣುಕುವ ಹೊತ್ತಿಗೆ ಜನಗಳ ಓಡಾಟ ಹೆಚ್ಚಾಯಿತು. ಚನ್ನಕ್ಕನ ಗುಡ್ಲು ಹೋಟೆಲ್‌ನ ಸ್ಟೌ ಬರ್‍ರ್ರೋ ಅಂತ ಆರಂಭಾತು. ಮುಖ ಮಾತ್ರ ಬಿಟ್ಟು ದುಬಟಿ ಹೊದ್ದು ಚಾ ಕುಡಿಯಲು ಅಲ್ಲಿ ಬಂದವರು ಬಿಸಿ ಬಿಸಿ ಚಾ ಹಿಗ್ಗಿ ಒಳಮೈಯಿಗೆ ಕಾವು ಕೊಟ್ಟುಕೊಂಡರು.

ಅದಾಗಲೆ ಊರಲ್ಲಿ ಸಣ್ಣ ಗುಸು ಗುಸು. 'ಅದಾರು ಊರು ಮುಂದಿನ ಹನುಮಪ್ಪನ ಗುಡಿ ಮುಂದಿನ ಕಟ್ಟೆ ಮೇಲೆ ಇರೋರು? ಬಿಳಿಗಡ್ಡ, ಅರೆಬರೆ